(ಇಂದು ದಿನಾಂಕ 30-05-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಪ್ರತಿವಾದಿಯರ ಪರ ಶ್ರೀ ಡಿ.ಎಸ್.ಭಟ್ಟ ವಕೀಲರಿಂದ-**

2 ನೇ ವಾದಿ ಈಶ್ವರ ಭಟ್ಟ ನನ್ನ ದಾಯಾದಿ ಚಿಕ್ಕಪ್ಪನಾಗಬೇಕು. 3 ನೇ ವಾದಿ ನನ್ನ ಅಜ್ಜನ ತಮ್ಮನ ಮಗ. ವಾದ ಪತ್ರವನ್ನು ತಯಾರಿಸುವ ಸಂದರ್ಭದಲ್ಲಿ ನನ್ನ ಮತ್ತು ಇತರ ವಾದಿಯರ ಸಂಬಂಧನಾತೆಯ ಬಗ್ಗೆ ನನ್ನ ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ. 5 ನೇ ಪ್ರತಿವಾದಿಯು ಸ.ನಂ. 349/1 ನ್ನು ಸದಾಶಿವ ಗಣಪತಿ ಶಾಸ್ತ್ರಿರವರಿಂದ ಕ್ರಯಕ್ಕೆ ಪಡೆದಂತಹ ದಿನಾಂಕ ನನಗೆ ಗೊತ್ತಿಲ್ಲ. ಸ.ನಂ. 349/1 ರ ಕ್ಷೇತ್ರ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ಹಾಕುವ ಪೂರ್ವದಲ್ಲಿ ಸ.ನಂ. 349/1 ಕ್ಕೆ ಸಂಬಂಧಪಟ್ಟ ಪಹಣಿಪತ್ರಿಕೆಯನ್ನು ವಕೀಲರಿಗೆ ನೀಡಿರುತ್ತೇನೆ.

ವಾದಪತ್ರದೊಂದಿಗೆ ಹಾಜರುಪಡಿಸಲಾದ ಹಾತ್ ನಕಾಶೆಯನ್ನು ತಯಾರಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ಸ.ನಂ. 349/1 ಮತ್ತು 322 ರ ನಡುವೆ ಗೋಪಿ ಹಳ್ಳ ಇರುವ ಬಗ್ಗೆ ಹಾತ್ ನಕಾಶೆಯಲ್ಲಿ ನಮೂದಿಸಿದ್ದು, ಸದರಿ ಗೋಪಿ ಹಳ್ಳ ಉತ್ತರದಿಂದ ದಕ್ಷಿಣಕ್ಕೆ ಹಾದು ಹೋಗಿರುತ್ತದೆ. ಸದರಿ ಗೋಪಿ ಹಳ್ಳ ಸುಮಾರು 4 - 5 ಫೂಟ್ ಅಗಲ ಇರಬಹುದು. ದಾವೆಯಲ್ಲಿ ಹೇಳಿರುವಂತಹ ಪೈಪ್ ಲೈನ್ ಗೋಪಿ ಹಳ್ಳದಲ್ಲಿ ಅಳವಡಿಕೆ ಆಗಿರುವುದಿಲ್ಲ.

ವಾದಿಗಳು ಮತ್ತು 1 ರಿಂದ 4 ನೇ ಪ್ರತಿವಾದಿಗಳ ಕುಟುಂಬದ ಆಸ್ತಿಗಳು ವಿಭಾಗ ಆಗಿದ್ದು, ಯಾವಾಗ ವಿಭಾಗ ಆಗಿರುತ್ತದೆ ಎಂದು ದಿನಾಂಕವನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ವಾದ ಪತ್ರದ 2 ನೇ ಖಂಡಿಕೆಯಲ್ಲಿ ನಮೂದಿಸಿರುವ ಸ್ವತ್ತುಗಳು ವಾದಿಗಳು ಮತ್ತು 1 ರಿಂದ 4 ನೇ ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಆಸ್ತಿಗಳಾಗಿತ್ತು ಎಂಬ ಬಗ್ಗೆ ಹಾಗೂ ಸದರಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಿಭಾಗ ಆಗಿದೆ ಎಂಬ ಬಗ್ಗೆ ನನ್ನ ಬಳಿ ದಾಖಲಾತಿ ಇರುವುದಿಲ್ಲ.

ಸ.ನಂ. 316/3 ರ ಕ್ಷೇತ್ರ 0-15-6 ಗುಂಟೆ ಇರಬಹುದು. ಸ.ನಂ. 316/3 ಕ್ಕೆ ಸಂಬಂಧಪಟ್ಟಂತೆ ವಾದಿಗಳಾದ ನಮ್ಮನ್ನು ಹೊರತುಪಡಿಸಿ ಇತರ ಹಕ್ಕುದಾರರು ಇರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಸ.ನಂ. 316/3 ರ ಇತರ ಹಕ್ಕುದಾರರಿಗೆ ದಾವೆಯನ್ನು ದಾಖಲಿಸುವ ಬಗ್ಗೆ ಮಾಹಿತಿ ನೀಡಿರುತ್ತೇನೆ. ಸ.ನಂ. 316/3 ಕ್ಕೆ ಸಂಬಂಧಪಟ್ಟಂತೆ ನಮ್ಮ ಕುಟುಂಬದಲ್ಲಿ ವಾಂಟಣೆ ಆಗಿರುವುದಿಲ್ಲ ಹಾಗೂ ಸದರಿ ಸ್ವತ್ತು ಈಗಲೂ ಸಹ ಸಾಮೂಹಿಕ ಆಸ್ತಿ ಆಗಿರುತ್ತದೆ. ಸ.ನಂ. 316/3 ರಲ್ಲಿ ಪಹಣಿಪತ್ರಿಕೆಯಲ್ಲಿ ನಮೂದಿಸಲಾದ ವ್ಯಕ್ತಿಗಳು ಸಾಮೂಹಿಕ ವಹಿವಾಟ ನಡೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿ.

ಸ.ನಂ. 316/3 ರ ಸ್ವತ್ತಿನಲ್ಲಿ ಒಟ್ಟು 3 ಮನೆಗಳು ಇವೆ. ಸದರಿ 3 ಮನೆಗಳು ಸುಮಾರು ತಲಾ 0-5-0 ಗುಂಟೆ ಕ್ಷೇತ್ರದಲ್ಲಿ ಇರಬಹುದು. ನಾನು ವಾಸ ಇರುವಂತಹ ಮನೆ ನನ್ನ ತಂದೆಯವರ

ಕಾಲದಲ್ಲಿಯೇ ನಿರ್ಮಿಸಲಾಗಿದ್ದು, 2 ಮತ್ತು 3 ನೇ ಪ್ರತಿವಾದಿಗಳು ವಾಸವಿರುವ ಮನೆಗಳನ್ನು ಯಾವಾಗ ನಿರ್ಮಾಣ ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ವಾಸವಿರುವಂತಹ ಮನೆಗೆ ಸಂಬಂಧಪಟ್ಟ ಪಂಚಾಯತಿ ದಾಖಲಾತಿಗಳಲ್ಲಿ ನನ್ನ ಹಾಗೂ ನನ್ನ ಚಿಕ್ಕಪ್ಪನ ಮಕ್ಕಳ ಹೆಸರು ಇರುತ್ತದೆ. ಸ.ನಂ. 316/3 ರಲ್ಲಿ ಮನೆ ಅಸ್ತಿತ್ವದಲ್ಲಿ ಇರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದು, ಮನೆಯ ಮಾಲಿಕತ್ವಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

ಸ.ನಂ. 316/3 ರಲ್ಲಿ ಹಾಲಿ 2 ಬಾವಿಗಳು ಇದ್ದು, ಅದರ ಪೈಕಿ ಒಂದನ್ನು ಮುಚ್ಚಲಾಗಿರುತ್ತದೆ. ಸದರಿ ಬಾವಿಯನ್ನು ಪ್ರಸ್ತುತ ದಾವೆ ಸಲ್ಲಿಸುವ ಪೂರ್ವದಲ್ಲಿಯೇ ಮುಚ್ಚಲಾಗಿರುತ್ತದೆ. ಸದರಿ ಬಾವಿಯು 3 ನೇ ವಾದಿಯ ವಹಿವಾಟಿನಲ್ಲಿ ಇದ್ದಂತಹ ಸ್ವತ್ತಿನಲ್ಲಿ ಇತ್ತು. ಮತ್ತೊಂದು ಬಾವಿಯು 3 ನೇ ವಾದಿಯ ಮನೆಯ ಹಿಂಭಾಗದಲ್ಲಿ ತೆಗೆಯಲಾಗಿರುತ್ತದೆ. ಸದರಿ ಬಾವಿಯನ್ನು ಈಗ್ಗೆ 7-8 ವರ್ಷಗಳ ಪೂರ್ವದಲ್ಲಿ ತೆಗೆಯಲಾಗಿರುತ್ತದೆ. ಸದರಿ ಬಾವಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಇರುವುದಿಲ್ಲ. ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಬಾವಿಗೆ ಸಂಬಂಧಪಟ್ಟ ಮಾಹಿತಿಯನ್ನು ವಾದಪತ್ರದಲ್ಲಿ ತಿಳಿಸಿರುವುದಿಲ್ಲ.

ದಾವೆಯಲ್ಲಿ ನಾನು ಮತ್ತೊಂದು ಬಾವಿಯಿಂದ ನೀರನ್ನು ತರುತ್ತಿದ್ದೆನು ಎಂದು ನಮೂದಿಸಿದ್ದು, ಸದರಿ ಬಾವಿಯು ಸ.ನಂ. 314/8 ರಲ್ಲಿ ಇದ್ದು, ಸದರಿ ಸ್ವತ್ತೂ ಸಹ ನಮ್ಮ ಸಾಮೂಹಿಕ ವಹಿವಾಟಿನಲ್ಲಿ ಇರುವಂತಹ ಸ್ವತ್ತು ಆಗಿರುತ್ತದೆ. ಸ.ನಂ. 314/8 ರ ಕ್ಷೇತ್ರ 0-3-12 ಆಗಿರುತ್ತದೆ. ಸದರಿ ಸ್ವತ್ತಿನಲ್ಲಿ ಇರುವಂತಹ ಬಾವಿಯನ್ನು ಸುಮಾರು 25 ವರ್ಷಗಳಿಗೂ ಪೂರ್ವದಲ್ಲಿ ತೋಡಲಾಗಿರುತ್ತದೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ